

ಹಸಿರು ಹಬ್ಬ

ಪರಿಸರ ದಿನದ ವಿಶೇಷ

# 50 ವರ್ಷಗಳ ಪರಿಸರ ಹೋರಾಟದ ಕಥನ

ಭಾರತದ ಪರಿಸರ ಹೋರಾಟಗಳಿಗೀಗ ಐವತ್ತರ ಹರೆಯ. 'ವಿಶ್ವ ಪರಿಸರ ದಿನಾಚರಣೆ'ಯ ಕೈಂಕರ್ಯಕ್ಕೂ ಅರ್ಧ ಶತಮಾನ ತುಂಬುತ್ತಿದೆ. ಪರಿಸರಪ್ರೇಮಿಗಳಿಗೆ ಸಂಭ್ರಮದ ಯುಗಳ!

'ಪ್ರಕೃತಿಯೊಂದಿಗೆ ಸಹಬಾಳ್ವೆ' ಎಂಬ ಜ್ಞಾನ ಮತ್ತು ತತ್ವದ ಮೇಲೆಯೇ ಬದುಕಿದ್ದ ಅನೇಕ ತಲೆಮಾರುಗಳನ್ನು ಪರಿಸರವೇ ಪೊರೆದು ಪೋಷಿಸುತ್ತಾ ಬಂದಿತ್ತು. ವೇದಗಳ ಕಾಲದಿಂದಲೂ 'ಸಹಜೀವನ' ತತ್ವದ ಮೇಲೆಯೇ ನಡೆಯುತ್ತಿದ್ದ ದೈನಂದಿನ ಜೀವನ, ಕೈಗಾರಿಕಾ ಕ್ರಾಂತಿಯ ನಂತರ ಹಠಾತ್ ಬದಲಾವಣೆ ಕಂಡಿತು. ಆಧುನಿಕತೆಯ ಅವಶ್ಯಕತೆಗಳಿಗೆ ತಮ್ಮ ಭೂಮಿಯ ವಿನ್ಯಾಸವನ್ನು ಬದಲಾಯಿಸಿಕೊಂಡಿದ್ದ ಬ್ರಿಟಿಷರು ನಮ್ಮನ್ನಾಳಲು ಬಂದಾಗ ಸುಸ್ಥಿತಿಯಲ್ಲಿದ್ದ, ಛಿದ್ರವಾಗದ ನೆಲ–ನದಿ–ಬೆಟ್ಟ, ಮೈದಾನಗಳನ್ನು ನೋಡಿ ಅತ್ಯಂತ ಖುಷಿಪಟ್ಟರು. ವ್ಯಾಪಾರದ ಹೆಸರಲ್ಲಿ ವ್ಯವಸ್ಥಿತವಾಗಿ ಲೂಟಿ ಶುರುಮಾಡಿದರು. ಹಸಿರಿನ ಬೆಲೆ ಅರಿತಿದ್ದ ಅವರು ಅದರ ವೈಭವ, ರಮ್ಯತೆಯನ್ನು ಕಾಪಾಡುತ್ತೇವೆ ಎಂಬ ಭ್ರಮೆ ಹುಟ್ಟಿಸಿದರು. ಒಳಗೊಳಗೇ ಕೊಡು–ಕೊಳ್ಳುವಿಕೆಯ ನಕ್ಷೆ ತಯಾರಿಸಿ ಎರಡೂ ಖಂಡಗಳ ಪಾರಿಸಾರಿಕ ಸ್ಥಿತ್ಯಂತರಗಳಿಗೆ ಕಾರಣರಾದರು. ಅವರು ನಿರ್ಗಮಿಸಿದ ಜಾಗದಲ್ಲಿ ಕುಳಿತ ನಾವು ಅಂದಿನ ಆರ್ಥಿಕ, ಸಾಮಾಜಿಕ ಅಗತ್ಯ ಮತ್ತು ಕಾರಣಗಳಿಗಾಗಿ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ, ಸಾಕಾರಗೊಳಿಸಿ ಬೇಡಿಕೆಗಳ ಪೂರೈಕೆಯತ್ತ ಮಾತ್ರ ಗಮನಹರಿಸಿ 'ಅಭಿವೃದ್ಧಿ' ಕಂಡೆವು. ಆಗ ಘಟಿಸಿದ ಅಪಸವ್ಯಗಳಿಗೆ ಗಮನ ಕೊಡುವಷ್ಟು ವ್ಯವಧಾನವೇ ಇರಲಿಲ್ಲ. ಜಾಣ ಕುರುಡು–ಕಿವುಡು ಪ್ರದರ್ಶಿಸಿದೆವು. ಬೃಹತ್ ಕಾಲುವೆ, ರಸ್ತೆ, ಅಣೆಕಟ್ಟು, ಕಾರ್ಖಾನೆಗಳೇ 'ಭಾರತದ ಆಧುನಿಕ ದೇವಾಲಯಗಳು' ಎಂಬ ಹಣೆಪಟ್ಟಿಯ ಅನೇಕ ರಚನೆಗಳು ತಮ್ಮ ಅಡಿಪಾಯದಲ್ಲಿ ಹಲವು ಲಕ್ಷ ಚದರ ಕಿ.ಮೀ.ನ ಕಾಡುಗಳನ್ನು ಮುಳುಗಿಸಿ ಮೇಲೆದ್ದು ಬಂದ